ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ : ಸಿ5(5) ಹಿ.ಬೆ. ಬಡ್ತಿ- 20/2020-21 ದಿನಾಂಕ : 02-01-2021

**ಜ್ಞಾಪನ**

**ವಿಷಯ :-** ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೆರಳಚ್ಚುಗಾರರಿಗೆ ಹಿರಿಯ ಬೆರಳಚ್ಚುಗಾರರಾಗಿ ಮೇಲ್ದರ್ಜೆಗೇರಿಸಿ ಬಡ್ತಿ ನೀಡುವ ಬಗ್ಗೆ.

**ಉಲ್ಲೇಖ :-** 1] ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 66 ಎಸ್‌ಆರ್‌ಪಿ 81 ದಿನಾಂಕ : 17-12-1981.

2] ದಿನಾಂಕ: 02-01-2021 ರಂದು ಜರುಗಿದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡಾವಳಿಯ ಮೇರೆಗೆ

* * * * * *

**ಪ್ರಸ್ತಾವನೆ :-**

ಸರ್ಕಾರದ ಉಲ್ಲೇಖಿತ (1)ರ ಆದೇಶದಲ್ಲಿ ಬೆರಳಚ್ಚುಗಾರರ ವೃಂದದ ಶೇ. 20% ರಷ್ಟು ಹುದ್ದೆಗಳನ್ನು ಹಿರಿಯ ಬೆರಳಚ್ಚುಗಾರರ ಹುದ್ದೆಗಳಿಗೆ ಮೇಲ್ದರ್ಜೆಗೇರಿಸಲು ಹಾಗೂ ಈ ರೀತಿ ಮೇಲ್ದರ್ಜೆಗೇರಿಸಿರುವ ಹುದ್ದೆಗಳಿಗೆ ಬೆರಳಚ್ಚುಗಾರರ ಹುದ್ದೆಯಲ್ಲಿ ಕನಿಷ್ಠ 10 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರುವವರಿಗೆ ಜೇಷ್ಠತೆ ಹಾಗೂ ಅರ್ಹತೆಯ ಆಧಾರದ ಮೇರೆಗೆ ಬಡ್ತಿಯನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

ಬೆಂಗಳೂರು ಆಯುಕ್ತಾಲಯದ ಅಡಿಯಲ್ಲಿ 89 ಬೆರಳಚ್ಚುಗಾರರ ಹುದ್ದೆಗಳು ಮಂಜೂರಾಗಿದ್ದು, ಇವುಗಳ ಪೈಕಿ ಉಲ್ಲೇಖಿತ ಸರ್ಕಾರದ ಆದೇಶದನ್ವಯ ವೃಂದ ಬಲಕ್ಕೆ ಅನುಗುಣವಾಗಿ 18 ಬೆರಳಚ್ಚುಗಾರರ ಹುದ್ದೆಗಳನ್ನು ಹಿರಿಯ ಬೆರಳಚ್ಚುಗಾರರ ಹುದ್ದಯನ್ನಾಗಿ ಮೇಲ್ದರ್ಜೆಗೇರಿಸಲು ಅವಕಾಶವಿರುತ್ತದೆ. ಈಗಾಗಲೇ 18 ಬೆರಳಚ್ಚುಗಾರರ ಹುದ್ದೆಯನ್ನು ಹಿರಿಯ ಬೆರಳಚ್ಚುಗಾರರ ಹುದ್ದೆಯನ್ನಾಗಿ ಮೇಲ್ದರ್ಜೆಗೇರಿಸಿದ್ದು ಈ ಪೈಕಿ ಪ್ರಸ್ತುತ 08 ಹುದ್ದೆಯು ಖಾಲಿ ಇರುತ್ತದೆ. ಬೆರಳಚ್ಚುಗಾರರ ಜೇಷ್ಠತಾ ಪಟ್ಟಿ ಆಧರಿಸಿ ಬೆರಳಚ್ಚುಗಾರರುಗಳು ಹಿರಿಯ ಬೆರಳಚ್ಚುಗಾರರ ಹುದ್ದೆಯನ್ನಾಗಿ ಮೇಲ್ದರ್ಜೆಗೇರಿಸಲು ಇಚ್ಚಾ ಪತ್ರವನ್ನು ನೀಡಿರುವವರಿಗೆ ಬಡ್ತಿಯನ್ನು ಪರಿಗಣಿಸಿದ್ದು ಪ್ರಸ್ತುತ 03 ಬೆರಳಚ್ಚುಗಾರರು ಅರ್ಹರಿರುವುದರಿಂದ ಅವರ ಬಡ್ತಿಯ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡ ಆದೇಶ.

**ಆದೇಶ :-**

ಮೇಲೆ ವಿವರಿಸಿದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿ ಪ್ರಸ್ತುತ ಬೆರಳಚ್ಚುಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಹಿರಿಯ ಬೆರಳಚ್ಚುಗಾರರಾಗಿ ಬಡ್ತಿ ಹೊಂದಲು ಅರ್ಹರಿರುವ ಈ ಕೆಳಕಂಡ 03 ಬೆರಳಚ್ಚುಗಾರರಿಗೆ ವೇತನ ಶ್ರೇಣಿ ರೂ.27650-52650 ರಲ್ಲಿ ಹಿರಿಯ ಬೆರಳಚ್ಚುಗಾರರ ಹುದ್ದೆಗೆ ಮೇಲ್ದರ್ಜೆಗೇರಿಸಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಿರಿಯ ಬೆರಳಚ್ಚುಗಾರರ ಹುದ್ದೆಯಲ್ಲಿ ಬಡ್ತಿಯನ್ನು ನೀಡಿ ಅದೇ ಸ್ಥಳದಲ್ಲಿ ಮುಂದುವರಿಸಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆದೇಶಿಸಲಾಗಿದೆ.

| ಕ್ರಸಂ | **ನೌಕರರ ಹೆಸರು ಮತ್ತು ಕಾರ್ಯ ನಿರ್ವಹಿಸುತ್ತಿರುವ ಕಛೇರಿ ವಿಳಾಸ**<br>ಶ್ರೀಮತಿ/ ಶ್ರೀ |
|---|---|
| 01 | ಶ್ರೀ ನರಸಿಂಹಯ್ಯ ಕೆ.ವಿ ಬೆರಳಚ್ಚುಗಾರರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ. |
| 02 | ಶ್ರೀಮತಿ. ಪಿ ಶಶಿಕಲಾ, ಬೆರಳಚ್ಚುಗಾರರು, ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರ ಕಛೇರಿ, ಮೈಸೂರು ವಿಭಾಗ, ಮೈಸೂರು. |
| 03 | ಶ್ರೀಮತಿ ವಿಶ್ವನಾಥ ದೊಡ್ಡಮನಿಬೆರಳಚ್ಚುಗಾರರು, ಉಪನಿರ್ದೇಶಕರ ಕಛೇರಿ, ದಾವಣಗೆರೆ ಜಿಲ್ಲೆ. |

ಷರತ್ತುಗಳು :-

1. ಹಿರಿಯ ಬೆರಳಚ್ಚುಗಾರರ ಹುದೆಯಲ್ಲಿ ನೌಕರರು ಬಡ್ತಿಯ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ವೇತನ ಶ್ರೇಣಿ ರೂ. 27650-52650ರಲ್ಲಿ ಕರ್ನಾಟಕ ಸಿವಿಲ್ ಸೇವಾ ನಿಯಮಗಳ 42(ಬಿ) ರನ್ವಯ ವೇತನ ನಿಗಧಿಗೆ ಅರ್ಹರಿರುತ್ತಾರೆ.
2. ಈ ನೌಕರರ ಸೇವೆಯು ತೃಪ್ತಿಕರವಾಗಿರತಕ್ಕದ್ದು ಒಂದು ವೇಳೆ ಯಾವುದೇ ಇಲಾಖಾ ವಿಚಾರಣೆ / ಮೊಕದ್ದಮೆಗಳು ಬಾಕಿ ಇದ್ದಲ್ಲಿ ಈ ಆದೇಶವು ತಂತಾನೆ ರದ್ದಾಗುತ್ತದೆ.
3. ಈ ನೌಕರರು ಪ್ರಸ್ತುತ ಪಡೆಯುತ್ತಿರುವ ಬೆರಳಚ್ಚುಗಾರರ ವಿಶೇಷ ವೇತನವನ್ನು ಬಡ್ತಿಯ ನಂತರವು ಸಹಾ ಪಡೆಯುಲು ಅರ್ಹರಿರುತ್ತಾರೆ.
4. ಈ ನೌಕರರು ಇನ್ನು ಮುಂದೆ ಸಹಾಯಕರ ಹುದ್ದೆಗಾಗಲೀ, ಶೀಘ್ರಲಿಪಿಗಾರರ ಹುದ್ದೆಗಾಗಲೀ ಮುಂಬಡ್ತಿಗೆ ಅರ್ಹರಿರುವುದಿಲ್ಲ.

(ವಿ.ಅನ್ಬುಕುಮಾರ್)
ಆಯುಕ್ತರು

ಇವರಿಗೆ :-

1. ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು
2. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ/ದಾವಣಗೆರೆ ಜಿಲ್ಲೆ.
3. ಶ್ರೀ ನರಸಿಂಹಯ್ಯ ಕೆ.ವಿ ಬೆರಳಚ್ಚುಗಾರರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.
4. ಶ್ರೀಮತಿ. ಪಿ ಶಶಿಕಲಾ, ಬೆರಳಚ್ಚುಗಾರರು, ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರ ಕಛೇರಿ, ಮೈಸೂರು ವಿಭಾಗ, ಮೈಸೂರು.
5. ಶ್ರೀಮತಿ ವಿಶ್ವನಾಥ ದೊಡ್ಡಮನಿಬೆರಳಚ್ಚುಗಾರರು, ಉಪನಿರ್ದೇಶಕರ ಕಛೇರಿ, ದಾವಣಗೆರೆ ಜಿಲ್ಲೆ.
6. ಕಛೇರಿ ಪ್ರತಿ.